ನಡೆದಾಡುವವರಿಗಾದರೂ ಅನುಕೂಲವಾಗಲಿ ಎಂದು ಬಿದಿರಿನ ಕಾಲುಸಂಕವೊಂದನ್ನು ಕಟ್ಟಿಕೊಂಡರು. ಗಾಳಿಮಳೆಗೆ ಉಯ್ಯಾಲೆಯಂತಾಡುತ್ತಿದ್ದ ಆ ತೂಗುಸೇತುವೆಯ ಮೇಲೆ ನಡೆಯುವುದನ್ನು ಅಭ್ಯಾಸ ಮಾಡಿಕೊಂಡರು. ಆದರೂ ಒಮ್ಮೆ ಕಂಕುಳಲ್ಲೊಂದು ಮಗು, ತಲೆ ಮೇಲೊಂದು ದಿನಸಿಯ ಚೀಲ ಹೊತ್ತ ಹೆಂಗಸೊಬ್ಬಳು ಗಾಳಿಯ ಆ ವಾಲಾಟವನ್ನು ಬ್ಯಾಲೆನ್ಸ್ ಮಾಡಲಾಗದೇ ಮುಗ್ಗರಿಸಿದ್ದರಿಂದ ಮಗು ನೀರೊಳಕ್ಕೆ ಬಿದ್ದು ಕಣ್ಣೆದುರೇ ಕಣ್ಮರೆಯಾದರೂ ಹೊಟ್ಟೆಯ ಕಿಚ್ಚೆಲ್ಲ ಹೊರಬರುವಂತೆ ಅರಚಾಡುವುದನ್ನು ಬಿಟ್ಟು ಮತ್ತೇನನ್ನೂ ಮಾಡಲಾಗದ ಆಕೆಯ ಅಸಹಾಯಕತೆಯ ಆಕ್ರಂದನ ಮುಗಿಲುಮುಟ್ಟಿದ್ದನ್ನು ನೋಡಲಾರದ ಜನ ಅಪಾಯಕಾರಿಯಾದ ಅದನ್ನು ಕಿತ್ತುಹಾಕಿಬಿಟ್ಟರು.

ಈ ಮಧ್ಯೆ ಊರ ಮನೆಗಳೂ ಒಡೆದು ಒಂದಕ್ಕೆ ಎರಡಾಗಿ, ಎರಡಕ್ಕೆ ನಾಲ್ಕಾಗಿ ನೂರೈವತ್ತು ಇನ್ನೂರು ಮನೆಗಳ ಗ್ರಾಮವಾಗಿ ಪರಿವರ್ತಿತವಾಗಿತ್ತು. ಮಕ್ಕಳೂ ಸಾಗರಕ್ಕೆ, ಶಿವಮೊಗ್ಗಕ್ಕೆ, ನಗರಕ್ಕೆ, ಹೊಸನಗರಕ್ಕೆ ಓದಲಿಕ್ಕೆಂದು ಹೋಗಿಬಂದು ನಾಗರಿಕತೆಯೂ ಕ್ರಮೇಣ ಊರೊಳಕ್ಕೆ ಕಾಲಿಟ್ಟಿತು. ಹೊಸ ತಲೆಮಾರಿನ ಹುಡುಗರು ದಲಿತ ಚಳವಳಿಯ ಸಿದ್ಧಲಿಂಗಯ್ಯನವರ ಮಾತಿಗೆ, ಬಂಡಾಯದ ಬರಗೂರರ ಮಾತಿಗೆ ಮರುಳಾದರು. ಎಂದೇ ಊರ ಪಡ್ಡೆ ಹುಡುಗರೆಲ್ಲ ಒಂದಾಗಿ 'ಯುವಕ ಸಂಘ'ದ ಹೆಸರಿನಲ್ಲಿ ಸಂಘಟಿತರಾದರು. ಅದರ ಮೂಲಕ ಹೋರಾಟ, ಚಳವಳಿ ರೂಪಿಸುತ್ತೇವೆಂದರು.

ಅದೇ ಸಮಯಕ್ಕೆ ತುರ್ತು ಪರಿಸ್ಥಿತಿಯ ಹೊಡೆತಕ್ಕೆ ಸಿಲುಕಿದ್ದ ಮಲೆನಾಡಿಗೂ ಚುನಾವಣೆ ಬಂತು. ಅತ್ತ ಗೋಪಾಲಗೌಡರು, ಇತ್ತ ಕಾಗೋಡು, ಕೋಣಂದೂರು, ಬಂಗಾರಪ್ಪನವರೆಲ್ಲ ಸಮಾಜವಾದಿ ಬಾವುಟ ಹಾರಿಸಿದರು. ತಣ್ಣಗಿದ್ದ ಮಲೆನಾಡೆಂಬ ಮಲೆನಾಡೇ ಬೆಚ್ಚಗಾಗಲಾರಂಭಿಸಿತು. ಯುವಕರ ಸಂಘಕ್ಕೆ ಅಧ್ಯಕ್ಷನಾಗಿದ್ದ ರತ್ನಾಕರನೆಂಬ ಯುವಕ, ನಮ್ಮೂರಿಗೆ ಒಂದು ಲಾಂಚ್ ಕೊಡಿಸುವುದಿದ್ದರೆ ಮಾತ್ರ ಊರೊಳಕ್ಕೆ ಪ್ರವೇಶ, ಇಲ್ಲದಿದ್ದರೆ ಚುನಾವಣೆಗೆ ಬಹಿಷ್ಕಾರ ಹಾಕುತ್ತೇವೆ ಎಂದು ಗುಡುಗಿದ. ಆಗ ತಾನೇ ಚಿಗುರೊಡೆಯುತ್ತಿದ್ದ ರೈತಸಂಘದ ನಂಜುಂಡಸ್ವಾಮಿಯವರ ಸಾಹಚರ್ಯ ಮಾಡಿಬಂದಿದ್ದ ಗೋವಿಂದರಾಜನೂ, ಅಧಿಕಾರಿಗಳಿಗೆ ರಾಜಕಾರಣಿಗಳಿಗೆ ಊರೊಳಕ್ಕೆ ಪ್ರವೇಶ ನಿಷಿದ್ಧ ಎಂಬ ಹಸಿರು ಬೋರ್ಡನ್ನು ಬರೆಸಿ ಹಾಕಿಸಿದ.

ಎಲೆಕ್ಷನ್ನಿಗೆ ನಿಂತಿದ್ದ ಎರಡೂ ಪಕ್ಷದ ಬಾಲಕೃಷ್ಣ ಮತ್ತು ಹಾಲೇಶಪ್ಪ ಇಬ್ಬರೂ ಪ್ರತ್ಯೇಕ ಪ್ರತ್ಯೇಕವಾಗಿ ಬಂದು ಹೊಳೆಬಾಗಿಲಿಗೆ ಮಗದೊಂದು ಹೊಸ ಬೋಟನ್ನು ತರಿಸುವುದಾಗಿಯೂ, ಆಗ ಹಳೆಯ ಲಾಂಚನ್ನು ಇಲ್ಲಿಗೆ ಸ್ಥಳಾಂತರಿಸುವುದಾಗಿಯೂ ಭರವಸೆ ಕೊಟ್ಟು ಮತದಾನವನ್ನೇನೋ ಮಾಡಿಸಿಕೊಂಡರು. ಒಂದು ಸಲ ಅವರೂ, ಇನ್ನೊಂದು ಸಲ ಇವರೂ ಗೆದ್ದುಬರಲಾರಂಭಿಸಿದರು. ಇಬ್ಬರನ್ನೂ ಒಂದೊಂದು ಸಲ ನೋಡಿದ ಮೇಲೂ ಲಾಂಚು ಬಾರದುದರಿಂದ ಈ ಬಾರಿ ಮತದಾನ ಬಹಿಷ್ಕರಿಸುವುದಾಗಿ ಪಾಂಪ್ಲೆಟ್ ಹೊಡೆಸಿದರು. ಪತ್ರಿಕೆಗೆ ಪ್ರಕಟಣೆ ನೀಡಿದರು. ಎಚ್ಚರಿಕೆ ಪತ್ರಿಕೆಯಲ್ಲಿ ಪ್ರಕಟಗೊಂಡ ಇಂಥದೊಂದು ವಾರ್ತೆಯನ್ನು ಕಂಡು ಯಾರೂ ನಡುಗಿಹೋಗದಿದ್ದರೂ, ತಲೆ ಸವರಲು ಮುಂದೆ ಬಂದರು. ತಾನು ಇಂತಿಂಥವರಿಗೆ ಹೇಳಿದ್ದೇನೆ ಎಂದು ಇವರೂ, ಅಂತಂಥವರಿಗೆ ಹೇಳಿದ್ದೇನೆ ಎಂದು ಅವರೂ ತಮ್ಮ ಪ್ರವರಗಳನ್ನು ಕೊಚ್ಚಿಕೊಂಡು ಇದೊಂದೇ ಒಂದು ಅವಕಾಶ ನೀಡಬೇಕೆಂದು ಕೋರಿಕೊಂಡರು. 'ಜೋಗದ ಸಿರಿ ಬೆಳಕಿನ' ಕಗ್ಗತ್ತಲೆಯಲ್ಲಿ ಯಾರಾದರೂ ಕೈಹಿಡಿದು ದಡ ಸೇರಿಸಿದರೆ ಸಾಕೆಂದು ಇವರೂ ನಿಸಾರರ 'ಕುರಿಗಳು ಸಾರ್ ಕುರಿಗಳು' ತರಹ ತಲೆದೂಗಿದರು.

ಹೀಗೆ ಈ ಬಾರಿ ಗೆದ್ದುಬಂದ ಹಾಲೇಶಪ್ಪನ ಬಳಿಗೆ ಹತ್ತಾರು ಜನ ಅದೇ ತೂತು ತೆಪ್ಪಕ್ಕೆ ಹುಟ್ಟುಹಾಕಿಕೊಂಡು ಹೋಗಿ ಕಂಡುಬಂದರು. 'ಈ ಸಲ ನಿಮ್ಮೂರಿಂದ ನನಗೆ ಒಂದೇ ಒಂದು